**ಆಕೆ ಒಂದು ಹೆಣ್ಣು ಎಂದು ಯಾರೂ ಪರಿಗಣಿಸಿಲ್ಲ; ಮನೆಯ ಹೆಂಗಸರೂ ಹೆಣ್ತನಗಳ ಗುಣಲಕ್ಷಣಗಳಿಗೆ ಹೊರತಾದವಳೆಂದು ಆಕೆಯನ್ನು ದೂರವಿಟ್ಟಿದ್ದಾರೆ. ಇಂತಹ ಸಂದರ್ಭದಲ್ಲಿ ಸುಬ್ಬಮ್ಮನಿಗೆ ಪ್ರಕೃತಿ ಉತ್ತರ ಕೊಡುತ್ತದೆ; ನೀನೊಂದು ಹೆಣ್ಣು ಎಂದು.**

ಪ್ರಶ್ನೆ ತುಂಬ ಮಹತ್ವದ್ದು. ಸಂಸ್ಕೃತಿ ಎನ್ನುವುದನ್ನು ನಿರ್ವಚನ ಮಾಡಿಕೊಳ್ಳುವುದು ಕಠಿಣ. ಪಿತೃಪ್ರಧಾನ ಸಮಾಜದಲ್ಲಿ ಸಂಸ್ಕೃತಿಯನ್ನು ನಿರ್ಧರಿಸುವವರು ಗಂಡಸರೇ ಇರುತ್ತಾರಲ್ಲವೇ? ಅದರಂತೆ ಸುಬ್ಬಮ್ಮನನ್ನು ಕೀಳುಗಳೆದು ನೋಡುವ ಸಂಸ್ಕೃತಿ ಗಂಡುಸಮಾಜದ ಭಾಗವೇ ಆಗಿದೆ. ರಾಷ್ಟ್ರೀಯತೆಯ ಪ್ರಭಾವಕ್ಕೆ ಒಳಗಾದ ಕುವೆಂಪು, ತಾಯಿಯ ಕಲ್ಪನೆಯನ್ನು ಉದಾತ್ತವಾಗಿ ಮಾಡಿಕೊಳ್ಳುತ್ತಾರೆ. ಆದರೆ ಅದಕ್ಕೆ ಹೊರತಾಗಿ ನಿಲ್ಲುವ ಸುಬ್ಬಮ್ಮನಂತಹ ಪಾತ್ರಗಳು ಕುಸಂಸ್ಕೃತಿಯ ದ್ಯೋತಕವಾಗಿ ನಿಲ್ಲುತ್ತವೆ. ಕಾನೂರು ಹೆಗ್ಗಡಿತಿಯೊಳಗೆ ಸುಬ್ಬಮ್ಮನಿಗೆ ಪ್ರತಿಪಾತ್ರ ಎಂದರೆ ಹೂವಯ್ಯನೇ. ಎಲ್ಲ ರೀತಿಯಲ್ಲೂ ಹೂವಯ್ಯ ಸುಬ್ಬಮ್ಮನಿಗೆ ಹೊರತಾಗಿ ನಿಲ್ಲುವಂತವನು. ಕಾನೂರು ಹೆಗ್ಗಡಿತಿಯ ಲೋಕವನ್ನು ಇಡಿಯಾಗಿ ಆವರಿಸಿಕೊಳ್ಳುವ ಹೂವಯ್ಯ ಅಷ್ಟೊಂದು ಪ್ರಭಾವಶಾಲಿಯಾಗಿರುವುದಕ್ಕೆ ಕಾರಣ ಅವನು ಪಡೆದ ಶಿಕ್ಷಣ, ತನ್ಮೂಲಕ ಪಡೆದ ಸಂಸ್ಕಾರಗಳೇ ಕಾರಣ ಎನ್ನಬಹುದು. ಸುಬ್ಬಮ್ಮನ ಒಂದೊಂದು ನಡೆಯೂ ಹೀನವಾಗಿರುವುದಕ್ಕೆ ಕಾರಣ ಆಕೆ ಅಶಿಕ್ಷಿತಳೂ ಸಂಸ್ಕಾರರಹಿತಳೂ ಆಗಿರುವುದೇ ಕಾರಣ ಎನ್ನುವ ತರ್ಕ ಕಾಣುತ್ತದೆ. ಸ್ವತಃ ಕುವೆಂಪು ಟಿಪ್ಪಣಿ ಬರೆದಂತೆ, 'ದಾರಿದ್ರ್ಯದಲ್ಲಿ ಹುಟ್ಟಿ, ಬೆಳೆದು, ಅಸಂಸ್ಕೃತರಿಂದ ಪೋಷಿತವಾಗಿ, ಅವರ ನಡೆನುಡಿ, ಆಚಾರ ವ್ಯವಹಾರ ಶೀಲಗಳನ್ನು ಕಲಿತ ಸುಬ್ಬಮ್ಮನಲ್ಲಿ ಸುಸಂಸ್ಕೃತ ಸ್ತ್ರೀ ಸಹಜವಾದ ಔದಾರ್ಯ, ಗಾಂಭೀರ್ಯ ನಯವಿನಯ ಸಂಯಮ ಸಂಚಲನಗಳು ಒಂದಿನಿತೂ ಇರಲಿಲ್ಲ. ಆದಕಾರಣ ಅದುವರೆಗೂ ಅವಕಾಶ ಸಿಕ್ಕದೆ ಸುಪ್ತವಾಗಿದ್ದ ಅಹಂಕಾರ, ಛಲ, ದರ್ಪ, ಸ್ವಾರ್ಥಪರತೆ, ದುರಭಿಮಾನ ಮೊದಲಾದ ಕಾಡುಭಾವಗಳು ಆಕೆ ಯಜಮಾನರ ಪತ್ನಿಯಾಗಿ ಕಾನೂರಿಗೆ ಹೆಗ್ಗಡಿತಿಯಾದ ಕೂಡಲೆ ಭಯಾನಕವಾಗಿ ಹೆಡೆಯೆತ್ತಿ ನಿಂತವು. ಪ್ರತಿಯೊಂದರಲ್ಲೂ ಸಣ್ಣಬುದ್ಧಿಯೇ ಪ್ರಕಾಶಿತವಾಯಿತು' (ಕಾನೂರು ಹೆಗ್ಗಡತಿ, ಪು. 36).

ಕಾನೂರಿನ ಸುಬ್ಬಮ್ಮ ಹೆಗ್ಗಡಿತಿಯಾಗಿ ಬರುವುದೇ ಆಕೆ ತನ್ನ ಜೀವನದಲ್ಲಿ ಕಂಡ ದೊಡ್ಡ ತಿರುವು. ಸುಬ್ಬಮ್ಮ ಒಕ್ಕಲಿಗ ಜಾತಿಯಲ್ಲಿ ಹುಟ್ಟಿದರೂ ಆ ಸಮಾಜದಲ್ಲಿ ಅನಾಗರಿಕವಾಗಿ ಉಳಿದಿದ್ದು ಹೇಗೆ? ಅವಳ ಸಾಮಾಜಿಕ ಹಿನ್ನೆಲೆಯೇ ಆಕೆಯ ಅವನತಿಗೆ ಕಾರಣವಾಯಿತೇ? ಎಂದು ನೋಡಿದರೆ ಸುಬ್ಬಮ್ಮನ ಬಗ್ಗೆ ಕನಿಕರ ಮೂಡುತ್ತದೆ. ಸಾಮಾಜಿಕ ಅಂತಸ್ತು, ವರ್ಗಗಳ ಮಾನದಂಡವು ಆಳದಲ್ಲಿ ಸಂಸ್ಕೃತಿಯ ವಿನ್ಯಾಸಗಳನ್ನು ಹೊಂದಿವೆ ಎನ್ನುವುದನ್ನು ಸುಬ್ಬಮ್ಮನ ಪಾತ್ರ ತೋರುತ್ತಿದೆಯಷ್ಟೆ. ಹೆಣ್ಣಿನ ಸೌಂದರ್ಯ, ಶೀಲಗಳೆನ್ನುವುದು ಒಂದು ವರ್ಗದ ನೋಟದಿಂದ ರೂಪಿತವಾಗಿ ಆಕೆಯ ವ್ಯಕ್ತಿತ್ವವನ್ನೇ ಕಟ್ಟಿಕೊಡುವ ಹಂತಕ್ಕೆ ಒಯ್ಯುವುದನ್ನು ಸುಬ್ಬಮ್ಮನ ಮೂಲಕ ಅರಿಯಬಹುದು. ಆದುದರಿಂದ ಸುಬ್ಬಮ್ಮ ಕಾಡುತ್ತಾಳೆ. ಈ ಸಮಾಜದಲ್ಲಿ ನಿರ್ದಿಷ್ಟ ಸಂಸ್ಕಾರವನ್ನು ಗಳಿಸಿಕೊಳ್ಳದೇ ಹೋದರೆ ಅದು ಪ್ರಾಣಿ ಸಹಜ ಬದುಕು ಎನ್ನುವುದಕ್ಕೆ ಸಮನಾಗಿದೆ ಎನ್ನುವುದನ್ನು ಕುವೆಂಪು ಸುಬ್ಬಮ್ಮ ಎಂಬ ಪಾತ್ರದ ಮೂಲಕ ತೆರೆದಿಟ್ಟಿದ್ದಾರೆ.

ಕಾನೂರಿನ ಪರಿಸರದಲ್ಲಿ ಹೂವಯ್ಯ ಎಷ್ಟೇ ಚೆನ್ನಾಗಿ ತಪಸ್ಸು ಮಾಡಿದರೂ ಸುಬ್ಬಮ್ಮ ಕಾಲಿಟ್ಟು ನಡೆಸಿದ ಕಾನೂರಿನ ಮನೆಯ ವಿನಾಶವೇ ವಿಷಾದವಾಗಿ ಉಳಿಯುತ್ತೆ. ಕಾನೂರು ಆಳಲು ಬಂದ ಹೆಣ್ಣು ತನ್ನ 'ಕುಸಂಸ್ಕೃತಿ'ಯ ಕಾರಣಕ್ಕೆ ನಾಶವಾಗಿದ್ದು ಆಕೆಯ ಬಗ್ಗೆ ಮರುಕ ಹುಟ್ಟಿಸುತ್ತದೆ.

●

